**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ: 17.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀಮತಿ.ಪಿ.ಎಂ.ಪಿ.ವಕೀಲರಿಂದ:**

ನನ್ನ ತಂದೆ ದಾವಾಸ್ವತ್ತನ್ನು ಆರ್.ರಂಗಯ್ಯ ಎನ್ನುವವರಿಂದ ಖರೀದಿಸಿರುತ್ತಾರೆ. ಸದರಿ ರಂಗಯ್ಯರವರು ದಾವಾಸ್ವತ್ತನ್ನು ಬೇರೆಯವರಿಂದ ಖರೀದಿಸಿರುತ್ತಾರೆ. ಸದರಿ ರಂಗಯ್ಯರವರು ಯಾವಾಗ ಮತ್ತು ಎಷ್ಟು ವಿಸ್ತೀರ್ಣದ ಸ್ವತ್ತನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾಸ್ವತ್ತನ್ನು ಖರೀದಿಸುವ ಕಾಲಕ್ಕೆ ರಂಗಯ್ಯರವರ ಬಳಿ ಅವರು ಖರೀದಿಸಿದ ಕ್ರಯಪತ್ರವನ್ನು ನೋಡಿ ಪರಿಶೀಲಿಸಿರಬಹುದು ಸದರಿ ಕ್ರಯಪತ್ರ ನನ್ನ ಬಳಿ ಇರುವುದಿಲ್ಲ. ರಂಗಯ್ಯರವರು ಸದರಿ ಸ್ವತ್ತನ್ನು ಮೂಡ್ಲಯ್ಯ, ಲಕ್ಕಣ್ಣ ಮತ್ತು ದಾಸಣ್ಣ ಎನ್ನುವವರಿಂದ ಖರೀದಿಸಿರುವುದಾಗಿ ತಿಳಿಸಿರುತ್ತಾರೆ. ರಂಗಯ್ಯರವರು 1 ಎಕರೆ 15 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ನಾನು ಎಂ.ಆರ್. ಅನ್ನು ಹಾಜರುಪಡಿಸಿರುತ್ತೇನೆ , ಅದರ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯಪತ್ರ ನನಗೆ ದೊರೆತಿರುವುದಿಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಇದಕ್ಕೆ ಸಂಬಂದಿಸಿದ ಯಾವುದೇ ಹಿಂಬರಹವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ರಂಗಯ್ಯರವರು ಖರೀದಿಸಿದ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ರಂಗಯ್ಯರವರು 1 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನನ್ನು ಖರೀದಿಸದೇ ಇರುವುದರಿಂದ ಅವರ ಹೆಸರಿನಲ್ಲಿರುವ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆ ಖರೀದಿಸಿರುವ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ- ಗಂಗಣ್ಣ, ಪಶ್ಚಿಮಕ್ಕೆ- ಬಿ.ಸಿ.ಗಂಗಣ್ಣ , ಉತ್ತರಕ್ಕೆ - ರಾಮಯ್ಯ , ದಕ್ಷಿಣಕ್ಕೆ- ಚಿಕ್ಕಣ್ಣರವರ ಜಮೀನುಗಳು ಇರುತ್ತವೆ. ಪೂರ್ವಕ್ಕೆ ಇರುವ ಗಂಗಣ್ಣ 1 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ರಂಗಯ್ಯರವರು ನನ್ನ ತಂದೆಗೆ ಸದರಿ ಜಮೀನನ್ನು ಮಾರಾಟ ಮಾಡುವಾಗ ಸದರಿ ಜಮೀನಿನ ಅಳತೆ ಮತ್ತು ಸ್ಕೆಚ್ ಮಾಡಿಸಿರುವುದಿಲ್ಲ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ಮಾರಾಟ ಮಾಡುವ ಮುನ್ನ ರಂಗಯ್ಯರವರು ಸ್ವಾಧೀನದಲ್ಲಿ ಇರಲಿಲ್ಲ.

3. ಈಗಲೂ ನನ್ನ ಜಮೀನಿನ ಪೂರ್ವಕ್ಕೆ 1 ನೇಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿ . 1 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಜಯಮ್ಮ ಮತ್ತು ಲಕ್ಕಮ್ಮ ರವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾಸ್ವತ್ತನ್ನು ರಂಗಯ್ಯರವರು ಖರೀದಿಸಿದ ನಂತರ ಅವರು ಯಾವುದೇ ಅಳತೆ ಅಥವಾ ಸ್ಕೆಚ್ ಮಾಡಿಸಿರುವುದಿಲ್ಲ. ರಂಗಯ್ಯರವರು ಸ್ವಾಧೀನದಲ್ಲಿದ್ದ ಜಾಗವನ್ನು ನನ್ನ ತಂದೆಗೆ ಬಿಟ್ಟುಕೊಟ್ಟಿದ್ದು ಅದರಲ್ಲಿ ನನ್ನ ತಂದೆ ನನಗೆ ದಾನಪತ್ರ ಬರೆಯುವವರೆಗೂ ಸ್ವಾಧೀನದಲ್ಲಿದ್ದರು ಎಂದರೆ ಸರಿ . ನನ್ನ ತಂದೆ ತಾವು ಸ್ವಾಧೀನದಲ್ಲಿದ್ದ ಸ್ವತ್ತನ್ನು ನನಗೆ ದಾನಪತ್ರದ ಮೂಲಕ ಬಿಟ್ಟುಕೊಟ್ಟಿದ್ದು ಅದರಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿ .

4. ನಿ.ಪಿ.30 ನಕ್ಷೆಯನ್ನು ಮಾಡಿಸುವ ಮುನ್ನ 2 ಮತ್ತು 3 ನೇ ಪ್ರತಿವಾದಿಗಳಿಗೆ ನಾನು ನೋಟೀಸ್ ನೀಡಿರುವುದಿಲ್ಲ. 1 ನೇ ಪ್ರತಿವಾದಿಗೆ ಮಾತ್ರ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ವರದಿ ಮತ್ತು ನಕ್ಷೆಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಹೆಸರು ಅಥವಾ ಸಹಿ ಇರುವುದಿಲ್ಲ ಎಂದರೆ ಸರಿ . ಸರ್ವೆ ವರದಿ ಮತ್ತು ನಕ್ಷೆಯನ್ನು 2 ಮತ್ತು 3 ನೇ ಪ್ರತಿವಾದಿಗಳ ಜಮೀನನ್ನು ಸೇರಿಸಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

5. ರಂಗಯ್ಯರವರು 1 ಎಕರೆ 15 ಗುಂಟೆ ಜಮೀನನ್ನು ಖರೀದಿಸಿರುವುದಿಲ್ಲ , ಸದರಿ ದಾಖಲಾತಿಗಳನ್ನು ಈ ದಾವೆಗಾಗಿ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳ ಜಮೀನನ್ನು ಕಬಳಿಸಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**